ದಿನದ ಪ್ರಶ್ನೆ ಪಟ್ಟಿಗೆ ಸೇರಿಸಲಾದ ಪ್ರಶ್ನೆಗಳು

ಶಿರಾ ತಾಲ್ಲೂಕಿನಲ್ಲಿ ಉಪ್ಪುನೇರಳೆ ಬೇಸಾಯ

೮೨(೭೩) ಶ್ರೀ ಮೂಡ್ಲೇಗೌಡ (ಶಿರಾ).—ಮಾನ್ಯ ಸಮಾಜ ಕಲ್ಯಾಣ ಹಾಗೂ ರೇಷ್ಮೆ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಸಿರಾ ತಾಲ್ಲೂಕಿನಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಹಿಪ್ಪನೇರಳೆ ಬೆಳೆ ಬೆಳೆಯಲಾಗುತ್ತಿದೆ,

(ಆ) ಈ ತಾಲ್ಲೂಕಿನಲ್ಲಿ ರೇಷ್ಮೆ ಮೊಟ್ಟೆಗಳ ಆವಶ್ಯಕತೆ ಎಷ್ಟಿದೆ ? ಮೊಟ್ಟೆ ಸಿಗದೆ ರೈತರು ತೊಂದರೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(೫) ಈ ಸಲುವಾಗಿ ಪ್ರಸಕ್ತ ಸಾಲಿನಲ್ಲಿ ಮೊಟ್ಟೆ ಉತ್ಪಾದನೆ ಕೇಂದ್ರವನ್ನು ಸಿರಾ ನಗರದಲ್ಲಿ ಪ್ರಾರಂಭಿಸುವ ಸಲಹೆ ಏನಾದರೂ ಸರ್ಕಾರದವರಲ್ಲಿದೆಯೇ ?

ಶ್ರೀಮತಿ ಚಂದ್ರಪ್ರಭಾ ಅರಸು (ಸಮಾಜ ಕಲ್ಯಾಣ ಹಾಗೂ ರೇಷ್ಮೆ ವ್ಯವಸಾಯ ಮಂತ್ರಿಗಳು).—

(ಅ) ೭೭೨ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪನೇರಳೆ ಬೆಳೆಯಲಾಗುತ್ತಿದೆ.

(ಆ) ಅಂದಾಜು ೨೦ ಲಕ್ಷ ಮೊಟ್ಟೆಗಳ ಆವಶ್ಯಕತೆ ಇದೆ. ಹೌದು. ರೇಷ್ಮೆ ಮೊಟ್ಟೆಗಳ ಉತ್ಪಾದನೆಯು ಗಣನೀಯವಾಗಿ ಹೆಚ್ಚಾಗಿದ್ದರೂ ಸಹ ಮೇ ಮತ್ತು ಜೂನ್ ತಿಂಗಳಲ್ಲಿ ರೇಷ್ಮೆ ಮೊಟ್ಟೆಗಳಿಗೆ ಸ್ವಲ್ಪ ಅಭಾವವಿತ್ತು ಆದರೆ ಮೊಟ್ಟೆಗಳ ಬೇಡಿಕೆಯನ್ನು ಪೂರೈಸಲಾಗಿದೆ.

(೫) ಇಲ್ಲ.

ಸ್ಟೆ ೃಪೆಂಡರಿ ಪದವೀಧರರು ಮತ್ತು ಕನ್ಸಾಲಿಡೇಟೆಡ್ ನೌಕರರ ಬಗ್ಗೆ.

೮೩(೬೭) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಸ್ಟೆ ೃಪೆಂಡರಿ ಪದವೀಧರರು ಮತ್ತು ಕನ್ಸಾಲಿಡೇಟೆಡ್ ನೌಕರರ ಕೆಲಸ ಜರೂರಾಗಿ ಖಾಯಂ ಮಾಡುವುದಾಗಿ ಜನತಾ ಸರಕಾರ ಅಧಿಕಾರ ವಹಿಸಿಕೊಂಡ ತಕ್ಷಣದಲ್ಲೇ ಭರವಸೆ ಕೊಟ್ಟಿದ್ದು ನಿಜವಲ್ಲವೆ ;

(ಆ) ರಾಜ್ಯದಲ್ಲಿ ಸ್ಟೆ ೃಪೆಂಡರಿ ಮತ್ತು ಕನ್ಸಾಲಿಡೇಟೆಡ್ ನೌಕರರು ಎಷ್ಟು ಮಂದಿ ಇದ್ದಾರೆ. ಇವರನ್ನು ಖಾಯಂ ಮಾಡುವುದರಿಂದ ರಾಜ್ಯ ಸರ್ಕಾರಕ್ಕೆ ಬರುವ ಖರ್ಚೆಷ್ಟು ;

(೫) ಅವರಲ್ಲಿ ವಯೋಮಿತಿ ಮೀರಿದವರ ಬಗ್ಗೆ ಸರಕಾರದ ಧೋರಣೆ ಏನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಆ ರೀತಿ ಭರವಸೆ ಕೊಟ್ಟಿಲ್ಲ.

(ಆ) ಸ್ಟೆ ೃಪೆಂಡರಿ ಪದವೀಧರರ ಸಂಖ್ಯೆ ಅಂದಾಜು ೧೨,೦೦೦. ಸ್ಥಳೀಯ ಅಭ್ಯರ್ಥಿಗಳ (ಕನ್ಸಾಲಿಡೇಟೆಡ್ ನೌಕರರೂ ಸೇರಿ) ಸಂಖ್ಯೆ ಅಂದಾಜು ೧೪,೦೦೦. ಸ್ಟೆ ೃಪೆಂಡರಿ ಪದವೀಧರರು ಈಗ ತಿಂಗಳಿಗೆ ರೂ. ೨೦೦ ಸ್ಟೆ ೃಪೆಂಡನ್ನು ಪಡೆಯುತ್ತಿದ್ದಾರೆ. ಇವರುಗಳು ಯಾವುದೇ ಹುದ್ದೆಗೆ ಮುಂದೆ ಆಯ್ಕೆ ಆದಲ್ಲಿ ಅವರು ಆ ಹುದ್ದೆಗೆ ನಿಗದಿಪಡಿಸಿರುವ ವೇತನ ಶ್ರೇಣಿಯ ಕನಿಷ್ಠ ವೇತನವನ್ನು ಪಡೆಯುವರು. ಹೀಗೆ ನೇಮಕವಾಗುವುದರಿಂದ ಆಗುವ ವೆಚ್ಚವನ್ನು ಖಚಿತವಾಗಿ ನಿರ್ಧರಿಸಲು ಆಗುವುದಿಲ್ಲ. ೨೫–೧೧–೧೯೭೭ರವರೆವಿಗೆ ನೇಮಕವಾದ ಸ್ಥಳೀಯ ಅಭ್ಯರ್ಥಿಗಳು ನಿಯತ ವೇತನ ಶ್ರೇಣಿಯ ವೇತನವನ್ನು ಪಡೆಯುವರು. ಅನಂತರ ನೇಮಕವಾದ ಸ್ಥಳೀಯ ಅಭ್ಯರ್ಥಿಗಳು ವೇತನ ಹುದ್ದೆಯ ಕನಿಷ್ಠ ವೇತನಕ್ಕಿಂತ ರೂ. ೧೦ ಕಡಿಮೆ ಪಡೆಯುವರು ಮತ್ತು ಭತ್ಯೆಗಳನ್ನು ಪಡೆಯುವಂತಿಲ್ಲ. ೨೫–೧೧–೧೯೭೭ಕ್ಕೆ ಮುಂಚೆ ನೇಮಕವಾದ ಸ್ಥಳೀಯ ಅಭ್ಯರ್ಥಿಗಳು ನಿಯಮಗಳಿಗನುಸಾರವಾಗಿ ನೇಮಕವಾದಾಗ ಯಾವುದೇ ಅಧಿಕ ಖರ್ಚು ಬರುವುದಿಲ್ಲ. ಅನಂತರ ನೇಮಕವಾದ ಸ್ಥಳೀಯ ಅಭ್ಯರ್ಥಿಗಳು ನಿಯಮಗಳಿಗನುಸಾರವಾಗಿ ನೇಮಕವಾದಾಗ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ವೇತನ ಮತ್ತು ಭತ್ಯೆಯನ್ನು